ಓ.ಎಸ್.ನಂ. 45/2016
ಪಿ.ಡಬ್ಲ್ಯೂ: 2
ದಿನಾಂಕಃ- 10-12-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ**

ಈ ದಿನ ನಾನು ನನ್ನಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಹೇಳಿ ಬರೆಸಿದ್ದು ಅದರಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿವೆ ಮತ್ತು ಅದಕ್ಕೆ ನನ್ನ ರುಜುವನ್ನು ಹಾಕಿದ್ದೇನೆ.

ನನ್ನ ಕುಟುಂಬದ ವಂಶವೃಕ್ಷವನ್ನ ಹಾಜರುಪಡಿಸಲಾಗಿ ಅದನ್ನ ನಿಪಿ-1 ಎಂದು, 5 ಪಹಣಿ ಪತ್ರಿಕೆಗಳನ್ನ ಹಾಜರುಪಡಿಸಲಾಗಿ ಅವುಗಳನ್ನ ಕ್ರಮವಾಗಿ ನಿಪಿ-2 ರಿಂದ ನಿಪಿ-6 ಎಂದು, ದಿನಾಂಕ 12.03.2004 ರಂದು ಶ್ರೀಮತಿ ಕೃಷ್ಣಮ್ಮರವರು ಆರ್ ಹನುಮಪ್ಪರವರಿಗೆ ಬರೆಸಿ ನೊಂದಾಯಿಸಿಕೊಟ್ಟ ರಿಲೀಸ್ ಡೀಡ್‌ನ ದೃಢೀಕೃತ ಪ್ರತಿಯನ್ನ ಹಾಜರುಪಡಿಸಲಾಗಿ ಅದನ್ನ ನಿಪಿ-7 ಎಂದು, ಬೇತಮಂಗಲದ ರೂರಲ್ ಹೈಸ್ಕೂಲ್‌ರವರುನೀಡಿರುವ ನನ್ನವರ್ಗಾವಣಾ ಪ್ರಮಾಣ ಪತ್ರವನ್ನ ಹಾಜರುಪಡಿಸಲಾಗಿ ಅದನ್ನ ನಿಪಿ-8 ಎಂದು, ದಿನಾಂಕ 27.03.2013 ರಲ್ಲಿಯ ಖರೀದಿ ಪತ್ರದ ದೃಢೀಕೃತ ನಕಲನ್ನ ಹಾಜರುಪಡಿಸಲಾಗಿ ಅದನ್ನ ನಿಪಿ-9 ಎಂದು, ದಿನಾಂಕ 27.03.2013 ರಲ್ಲಿಯ ಇನ್ನೊಂದು ಖರೀದಿ ಪತ್ರದ ದೃಢೀಕೃತ ನಕಲನ್ನ ಹಾಜರುಪಡಿಸಲಾಗಿ ಅದನ್ನ ನಿಪಿ-10 ಎಂದು, ದಿನಾಂಕ 13.02.2015 ರಲ್ಲಿಯ ಖರೀದಿ ಪತ್ರದ ದೃಢೀಕೃತ ನಕಲನ್ನ ಹಾಜರುಪಡಿಸಲಾಗಿ ಅದನ್ನ ನಿಪಿ-11 ಎಂದು, ದಿನಾಂಕ 31.12.2015 ರಲ್ಲಿಯ ಕರಾರು ಪತ್ರದ ದೃಢೀಕೃತ ನಕಲನ್ನ ಹಾಜರುಪಡಿಸಲಾಗಿ ಅದನ್ನ ನಿಪಿ-12 ಎಂದು, ವಿಶೇಷ ಭೂಸ್ವಾಧೀನಾಧಿಕಾರಿಯ

ನೋಟಿಸ್ ದಿನಾಂಕ 26.03.2018 ರ ಸ್ವೀಕೃತಿ ಪ್ರತಿಯನ್ನ ಹಾಜರುಪಡಿಸಲಾಗಿ ಅದನ್ನ ನಿಪಿ-13 ಎಂದು ಗುರುತಿಸಲಾಯಿತು.

ಆದ್ದರಿಂದ ನನ್ನ ದಾವೆಯನ್ನು ನನ್ನ ಪ್ರಾರ್ಥನೆಯ ಮೇರೆಗೆ ಡಿಕ್ರಿ ಮಾಡಬೇಕಾಗಿ ಕೋರಿಕೆ.

ಪಾಟೀ ಸವಾಲುಃ ಸಮಯ ಕೇಳಿದ್ದು ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

(ಮಹೇಶ ಶಂ.ಪಾಟೀಲ)
ಸಿ/ಸಿ ಹಿರಿಯ ಸಿ.ಜೆ ಮತ್ತು ಪ್ರಧಾನ ಜೆಎಂಎಫ್‌ಸಿ
ಕೆಜಿಎಫ್